Akashvani: Bangalore
National News In Kannada
06.11.2025 : 13.10hrs
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

06.11.2025 : 13.10hrs
*********

ಮುಖ್ಯಾಂಶಗಳು

1. ಮೊದಲ ಹಂತದ ಬಿಹಾರ ವಿಧಾನಸಭಾ ಚುನಾವಣೆಯ ಮತದಾನ ಪ್ರಗತಿಯಲ್ಲಿ ; ಹಲವು ಪ್ರಮುಖ ನಾಯಕರಿಂದ ಮತ ಚಲಾವಣೆ
2. ಇಸ್ರೇಲ್‌ಗೆ ರಕ್ಷಣಾ ಕಾರ್ಯದರ್ಶಿ ನೇತೃತ್ವದ ಭಾರತೀಯ ನಿಯೋಗ ಭೇಟಿ; ಸಹ ಉತ್ಪಾದನೆ, ಸಹ ಅಭಿವೃದ್ಧಿಗಾಗಿ ಮಾರ್ಗಾನ್ವೇಷಣೆ
3. ಸಂಸತ್ ಖೇಲ್ ಮಹೋತ್ಸವ್ ಭಾಗವಾಗಿ ನವದೆಹಲಿಯಲ್ಲಿ ಇದೇ ೧೬ರಂದು ನಮೋ ರನ್ ಮ್ಯಾರಥಾನ್ ಆಯೋಜನೆ
4. ಐದು ಪಂದ್ಯಗಳ ಅಂತಾರಾಷ್ಟ್ರೀಯ ಟಿ-೨೦ ಕ್ರಿಕೆಟ್ ಸರಣಿ ; ೪ನೇ ಪಂದ್ಯದಲ್ಲಿಂದು ಭಾರತ-ಆಸ್ಟ್ರೇಲಿಯಾ ಮುಖಾಮುಖಿ

*********

ಬಿಹಾರದಲ್ಲಿ ವಿಧಾನಸಭಾ ಚುನಾವಣೆಯ ಮೊದಲ ಹಂತದ ಮತದಾನ ಪ್ರಕ್ರಿಯೆ ಪ್ರಗತಿಯಲ್ಲಿದ್ದು, ೧೧ ಗಂಟೆ ವೇಳೆಗೆ ಶೇಕಡ ೨೭.೬೫ ರಷ್ಟು ಮತದಾನ ದಾಖಲಾಗಿದೆ. ಆ ವೇಳೆಗೆ ಬೇಗುಸರೈ ಜಿಲ್ಲೆಯಲ್ಲಿ ಗರಿಷ್ಠ ೩೦.೩೭ ಪ್ರತಿಶತ ಮತದಾನ ದಾಖಲಾಗಿತ್ತು. ಮತದಾರರಿಗೆ ತಮ್ಮ ಮತ ಚಲಾಯಿಸಲು ಸಂಜೆ ೬ ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ. ಈ ಹಂತದಲ್ಲಿ ೧೮ ಜಿಲ್ಲೆಗಳ ೧೨೧ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿದೆ. ಈ ನಡುವೆ, ಭದ್ರತಾ ಕಾರಣಗಳಿಂದಾಗಿ, ಸಿಮ್ರಿ ಭಕ್ತಿಯಾರ್‌ಪುರ, ಮಹಿಷಿ, ತಾರಾಪುರ, ಮುಂಗೇರ್, ಜಮಾಲ್‌ಪುರ ಮತ್ತು ಸೂರ್ಯಗಢ ವಿಧಾನಸಭಾ ಕ್ಷೇತ್ರದ ೫೬ ಮತಗಟ್ಟೆಗಳಲ್ಲಿ ಮತದಾನ ಪ್ರಕ್ರಿಯೆ ಒಂದು ಗಂಟೆ ಮುಂಚಿತವಾಗಿ ಅಂದರೆ ಸಂಜೆ ೫ ಗಂಟೆಗೆ ಕೊನೆಗೊಳ್ಳಲಿದೆ. ಹಲವು ಪ್ರಮುಖ ನಾಯಕರು ಇಂದು ತಮ್ಮ ಮತ ಚಲಾಯಿಸಿದ್ದಾರೆ. ಪ್ರಮುಖವಾಗಿ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಪಾಟ್ನಾದ್ ಬಖ್ತಿಯಾರ್ ಕ್ಷೇತ್ರದಲ್ಲಿ ಮತ ಚಲಾಯಿಸಿದರೆ, ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರೈ, ಪತ್ನಿಯೊಂದಿಗೆ ಹಜೀಪುರದಿಂದ ಮತ ಚಲಾಯಿಸಿದರು. ಮಹಾಘಟಬಂಧನ್‌ದ ಉಪಮುಖ್ಯಮಂತ್ರಿ

ಅಭ್ಯರ್ಥಿ ಮುಖೇಶ್ ಸಹಾನಿ ದರ್ಭಾಂಗದಲ್ಲಿ ಮತ ಚಲಾಯಿಸಿದರು. ಮೊದಲ ಹಂತದ ಮತದಾನದಲ್ಲಿ ಬಿಹಾರದ ಮತದಾರರು ಉತ್ಸಾಹದಿಂದ ಪಾಲ್ಗೊಂಡು ತಮ್ಮ ಹಕ್ಕು ಚಲಾಯಿಸುವಂತೆ ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮದ ಮೂಲಕ ಕರೆ ನೀಡಿದ್ದಾರೆ. ಮುಕ್ತ, ನ್ಯಾಯಯುತ ಮತ್ತು ಶಾಂತಿಯುತ ಮತದಾನವನ್ನು ಖಚಿತಪಡಿಸಿಕೊಳ್ಳಲು ವ್ಯಾಪಕ ಭದ್ರತಾ ವ್ಯವಸ್ಥೆಗಳನ್ನು ಮಾಡಲಾಗಿದೆ. ಎಲ್ಲಾ ೪೫ ಸಾವಿರದ ೩೪೧ ಮತಗಟ್ಟೆಗಳಿಂದ ವೆಬ್‌ಕಾಸ್ಟಿಂಗ್ ಮಾಡಲಾಗಿದೆ. ವಿಧಾನಸಭಾ ಚುನಾವಣೆಯ ಮೊದಲ ಹಂತದಲ್ಲಿ, ೧೨೨ ಮಹಿಳಾ ಅಭ್ಯರ್ಥಿಗಳು ಸೇರಿ ಒಟ್ಟು ೧ ಸಾವಿರದ ೩೧೪ ಅಭ್ಯರ್ಥಿಗಳ ರಾಜಕೀಯ ಭವಿಷ್ಯವನ್ನು ೩.೭೫ ಕೋಟಿಗೂ ಹೆಚ್ಚು ಮತದಾರರು ನಿರ್ಧರಿಸಲಿದ್ದಾರೆ.

*********

ಈ ನಡುವೆ ೨ನೇ ಹಂತದ ಬಿಹಾರ ವಿಧಾನಸಭಾ ಚುನಾವಣೆಗೆ ಪ್ರಚಾರ ಕಾರ್ಯ ಭರದಿಂದ ಸಾಗಿದೆ. ಎನ್‌ಡಿಎ ಮತ್ತು ಮಹಾಘಟಬಂಧನ್ ಸೇರಿದಂತೆ ವಿವಿಧ ರಾಜಕೀಯ ಪಕ್ಷಗಳ ತಾರಾ ಪ್ರಚಾರಕರು ಹಾಗೂ ಹಿರಿಯ ನಾಯಕರು ೨ನೇ ಹಂತದಲ್ಲಿ ಚುನಾವಣೆ ನಿಗದಿಯಾಗಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಹಲವು ಚುನಾವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡುತ್ತಿದ್ದಾರೆ. ಹಿರಿಯ ಬಿಜೆಪಿ ನಾಯಕ ಹಾಗೂ ಪ್ರಧಾನಿ ನರೇಂದ್ರ ಮೋದಿ, ಅರಾರಿಯಾದಲ್ಲಿ ಚುನಾವಣಾ ರ‍್ಯಾಲಿಯನ್ನುದ್ದೇಶಿಸಿ ಮಾತನಾಡಿದರು. ಬಳಿಕ ಅವರು, ಬಾಗಲ್ಪುರದಲ್ಲಿ ನಡೆಯುವ ಸಾರ್ವಜನಿಕ ರ‍್ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ಕೇಂದ್ರ ಸಚಿವ ಅಮಿತ್ ಶಾ, ಪಶ್ಚಿಮ ಚಂಪಾರಣ್, ಪೂರ್ವ ಚಂಪಾರಣ್ ಮತ್ತು ಮಧುಬನಿ ಜಿಲ್ಲೆಗಳಲ್ಲಿ ಪ್ರಚಾರ ನಡೆಸಲಿದ್ದಾರೆ. ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪೂರ್ವ ಚಂಪಾರಣ್ ಮತ್ತು ಸೀತಾಮರ್ಹಿ ಜಿಲ್ಲೆಗಳಲ್ಲಿ ಎನ್‌ಡಿಎ ಅಭ್ಯರ್ಥಿ ಪರ ಮತಯಾಚಿಸಲಿದ್ದಾರೆ. ಮಹಾಘಟಬಂಧನ್‌ನ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಪ್ರಸಾದ್ ಯಾದವ್, ಮಧುಬನಿ, ಸುಪೌಲ್, ಕಿಶನ್ ಗಂಜ್, ಕತಿಹಾರ್ ಮತ್ತು ಪೂರ್ಣಿಮಾ ಜಿಲ್ಲೆಗಳನ್ನು ಒಳಗೊಂಡ ೧೮ ರ‍್ಯಾಲಿಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

*********

ಬೆಂಗಳೂರಿನಲ್ಲಿಂದು ಹನ್ನೊಂದನೆ ಭಾರತೀಯ ತೋಟಗಾರಿಕಾ ಸಮಾವೇಶಕ್ಕೆ ಚಾಲನೆ ದೊರೆತಿದೆ. ಒಳಗೊಳ್ಳುವ ಸಮಾನ ಮತ್ತು ಸುಸ್ಥಿರ ಬೆಳವಣಿಗೆಗಾಗಿ ತೋಟಗಾರಿಕೆ ಎಂಬುದು ಇದೇ ೯ರವರೆಗೆ ನಡೆಯುವ ಈ ಸಮಾವೇಶದ ಧ್ಯೇಯವಾಕ್ಯವಾಗಿದೆ. ಕೃಷಿ ವಿಜ್ಞಾನ ವಿಶ್ವವಿದ್ಯಾಲಯದ ಆವರಣದಲ್ಲಿರುವ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ

ಸಮಾವೇಶ ಕೇಂದ್ರದಲ್ಲಿ ಆಯೋಜಿಸಲಾಗಿರುವ ಈ ಕಾರ್ಯಕ್ರಮದಲ್ಲಿ ಪದ್ಮಭೂಷಣ ಪುರಸ್ಕೃತ ಐಸಿಎಆರ್ ಮಾಜಿ ಮಹಾ ನಿರ್ದೇಶಕ ಡಾ. ಆರ್.ಎಸ್. ಪಾರೋಡ ಪಾಲ್ಗೊಂಡರು. ಈ ವೇಳೆ ಮಾತನಾಡಿದ ಅವರು, ತೋಟಗಾರಿಕೆಯನ್ನು ಕೇವಲ ಬೆಳೆ ಆಧಾರಿತ ಚಟುವಟಿಕೆಯಾಗಿ ನೋಡದೇ, ಈ ಕ್ಷೇತ್ರದಲ್ಲಿ ಪೋಷಣೆ, ಸುಸ್ಥಿರತೆ ಮತ್ತು ರೈತರ ಆರ್ಥಿಕ ಪ್ರಗತಿಯನ್ನು ಉತ್ತೇಜಿಸುವ ವ್ಯವಸ್ಥೆ ಆಧಾರಿತ ದೃಷ್ಟಿಕೋನವನ್ನು ಅಳವಡಿಸುವ ಅಗತ್ಯವಿದೆ. ದೇಶದಲ್ಲಿ ಶೇಕಡ ೫೦ರಷ್ಟು ಮಹಿಳೆಯರು ಪೋಷಕಾಂಶ ಕೊರತೆಯಿಂದ ಬಳಲುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ತೋಟಗಾರಿಕೆ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಹೇಳಿದರು. ಕಾರ್ಯಕ್ರಮವು ೯ ತಾಂತ್ರಿಕ ಅಧಿವೇಶನ ಹಾಗೂ ಹೊಸ ತಂತ್ರಜ್ಞಾನಗಳು ಮತ್ತು ತಳಿಗಳನ್ನು ಪ್ರದರ್ಶಿಸಲು ೧೧ ಬೆಳೆ ನಿರ್ದಿಷ್ಟ ಕಾರ್ಯಾಗಾರಗಳನ್ನು ಒಳಗೊಂಡಿದೆ.

*********

ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್ ನೇತೃತ್ವದ ಭಾರತೀಯ ನಿಯೋಗ ಇಂದು ಇಸ್ರೇಲ್‌ನಲ್ಲಿರುವ ಪ್ರಮುಖ ಇಸ್ರೇಲಿ ರಕ್ಷಣಾ ಕಂಪನಿಗಳಿಗೆ ಭೇಟಿ ನೀಡಿ, ಸಹ ಉತ್ಪಾದನೆ ಮತ್ತು ಸಹ ಅಭಿವೃದ್ಧಿಗೆ ಮಾರ್ಗಗಳನ್ನು ಅನ್ವೇಷಿಸಿತು. ಅಸ್ತಿತ್ವದಲ್ಲಿರುವ ಪಾಲುದಾರಿಕೆಯನ್ನು ಬಲಪಡಿಸುವುದು ಮತ್ತು ಆತ್ಮ ನಿರ್ಭರ ಭಾರತ ಉಪಕ್ರಮವನ್ನು ಮುನ್ನಡೆಸುವ ಗುರಿಯನ್ನು ಈ ಭೇಟಿ ಹೊಂದಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

*********

ಕೇಂದ್ರ ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ಪಬಿತ್ರ ಮಾರ್ಗರೀಟ ಇಕ್ವೇಡರ್‌ನ ವಿದೇಶಾಂಗ ಮತ್ತು ಸಚಿವ ಗೇಬ್ರಿಯಲ್ ಸಾಮರ್ ಫೆಲ್ಡ್ ಅವರನ್ನು ಭೇಟಿಯಾದರು. ಇಕ್ವೇಡರ್ ಭೇಟಿಯ ಸಮಯದಲ್ಲಿ ಸಚಿವ ಪಬಿತ್ರ ಹಾಗೂ ಇಕ್ವೇಡರ್ ಸಚಿವರು ರಾಜಕೀಯ, ವ್ಯಾಪಾರ, ಔಷಧ, ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಹಕಾರ ಬಲಪಡಿಸಲು ಇರುವ ಅವಕಾಶಗಳನ್ನು ಅನ್ವೇಷಿಸಿದರು. ಇದೇ ವೇಳೆ ಉಭಯ ನಾಯಕರು ಉಭಯ ರಾಷ್ಟ್ರಗಳ ರಾಜತಾಂತ್ರಿಕ ತರಬೇತಿ ಸಂಸ್ಥೆಗಳ ನಡುವಿನ ಸಹಕಾರದ ಕುರಿತ ತಿಳಿವಳಿಕಾ ಒಪ್ಪಂದಕ್ಕೆ ಸಹಿ ಹಾಕಿದರು. ನಿನ್ನೆ ಸಚಿವರು ಇಕ್ವೇಡರ್‌ನ ರಾಜಧಾನಿ ಕ್ವಿತೊದಲ್ಲಿ ಭಾರತದ ರಾಯಭಾರಿ ಕಚೇರಿಯನ್ನು ಜಂಟಿಯಾಗಿ ಉದ್ಘಾಟಿಸಿದರು.

*********

ನವದೆಹಲಿಯಲ್ಲಿ ಸಂಸತ್ ಖೇಲ್ ಮಹೋತ್ಸವದ ಭಾಗವಾಗಿ ಇದೇ ೧೬ರಂದು ನಮೋ ರನ್ ಮ್ಯಾರಥಾನ್ ಓಟ ಸ್ಪರ್ಧೆಯನ್ನು ಆಯೋಜಿಸಲಾಗುವುದು ಎಂದು ಕಾರ್ಪೋರೇಟ್ ವ್ಯವಹಾರಗಳ ಖಾತೆ ರಾಜ್ಯ ಸಚಿವ ಹರ್ಷ್ ಮಲ್ಹೋತ್ರಾ ಘೋಷಿಸಿದ್ದಾರೆ. ಸಂಸತ್ ಖೇಲ್ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸುಮಾರು ೩೦ ಸಾವಿರ ಕ್ರೀಡಾಪಟುಗಳು ಖೇಲ್ ಮಹೋತ್ಸವಕ್ಕೆ ಈಗಾಗಲೇ ನೋಂದಾಯಿಸಿಕೊಂಡಿದ್ದಾರೆ. ಈ ಪಂದ್ಯಾವಳಿಯಲ್ಲಿ ಉತ್ತಮ ಪ್ರದರ್ಶನ ನೀಡುವ ಆಟಗಾರರಿಗೆ ಉತ್ತಮ ತರಬೇತಿದಾರರು, ಉಪಕರಣಗಳು ಮತ್ತು ಸುಸಜ್ಜಿತ ಕ್ರೀಡಾಂಗಣದಲ್ಲಿ ಆಡಲು ಅವಕಾಶ ಒದಗಿಸಲಾಗುವುದು. ಮೂರು ಹಂತದ ಈ ಸ್ಪರ್ಧೆಯಲ್ಲಿ ಒಲಿಂಪಿಕ್ಸ್‌ನಲ್ಲಿ ನೋಂದಾಯಿತ ಮತ್ತು ಭಾರತದ ಸಾಂಪ್ರದಾಯಿಕ ಕ್ರೀಡೆಗಳನ್ನು ಆಯೋಜಿಸಲಾಗುವುದು ಎಂದರು.

ಧ್ವನಿ : ಹರ್ಷ ಮಲ್ಹೋತ್ರಾ (೩೨ ಸೆಕೆಂಡ್‌ಗಳು)

*********

ಎಲ್ಲಾ ರೀತಿಯ ಭಯೋತ್ಪಾದನೆಯನ್ನು ಖಂಡಿಸಿದ್ದಕ್ಕಾಗಿ ಲ್ಯಾಟ್ವಿಯಾ ದೇಶವನ್ನು ಭಾರತ ಶ್ಲಾಘಿಸಿದೆ ಹಾಗೂ ೨೦೨೬-೨೭ರ ಅವಧಿಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಲ್ಯಾಟ್ವಿಯಾದ ಕಾರ್ಯನಿರ್ವಹಣೆಗೆ ತನ್ನ ಬೆಂಬಲವನ್ನು ಪುನರುಚ್ಚರಿಸಿದೆ. ರಿಗಾದಲ್ಲಿ ನಡೆದ ೬ನೇ ಭಾರತ-ಲ್ಯಾಟ್ವಿಯಾ ವಿದೇಶಾಂಗ ಕಚೇರಿ ಸಮಾಲೋಚನಾ ಸಭೆಯ ವೇಳೆ ವಿದೇಶಾಂಗ ವ್ಯವಹಾರಗಳ ಪಶ್ಚಿಮ ವಿಭಾಗದ ಕಾರ್ಯದರ್ಶಿ ಸಿಬಿ ಜಾರ್ಜ್, ಭಾರತವನ್ನು ಪ್ರತಿನಿಧಿಸಿದ್ದರು. ಸಭೆಯಲ್ಲಿ ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧಗಳ ಕುರಿತು ಪ್ರಗತಿ ಪರಿಶೀಲನೆ ನಡೆಸಲಾಗಿದೆ. ವ್ಯಾಪಾರ, ತಂತ್ರಜ್ಞಾನ, ನಾವೀನ್ಯತೆ ಕ್ಷೇತ್ರಗಳಲ್ಲಿ ಸಂಬಂಧಗಳನ್ನು ವಿಸ್ತರಿಸಲು ಎರಡೂ ಕಡೆಯವರು ಒಮ್ಮತ ವ್ಯಕ್ತಪಡಿಸಿದ್ದಾರೆ.

*********

ಭಾರತ-ಆಸ್ಟ್ರೇಲಿಯಾ ನಡುವಿನ ಐದು ಪಂದ್ಯಗಳ ಟಿ-೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಸರಣಿಯ ೪ನೇ ಪಂದ್ಯ ಆಸ್ಟ್ರೇಲಿಯಾದ ಕ್ವಿನ್ಸ್ ಲ್ಯಾಂಡ್‌ನ ಕರ್‍ರಾರ ಓವಲ್ ಕ್ರೀಡಾಂಗಣದಲ್ಲಿ ನಡೆಯಲಿದೆ. ಪಂದ್ಯ ಭಾರತೀಯ ಕಾಲಮಾನ ೧.೪೫ಕ್ಕೆ ಆರಂಭವಾಗಲಿದೆ. ಮೂರನೇ ಪಂದ್ಯದಲ್ಲಿ ಭಾರತ, ಆಸ್ಟ್ರೇಲಿಯಾವನ್ನು ೫ ವಿಕೆಟ್‌ಗಳಿಂದ ಮಣಿಸಿದ ಬಳಿಕ ಪ್ರಸ್ತುತ ಸರಣಿ ೧-೧ ಅಂತರದಲ್ಲಿ ಸಮಬಲದಲ್ಲಿದೆ. ಈ ನಡುವೆ ೪ನೇ ಪಂದ್ಯಕ್ಕೆ ಆಸ್ಟ್ರೇಲಿಯಾ ತಂಡದಲ್ಲಿ ಕೆಲವು ಬದಲಾವಣೆಗಳನ್ನು

ಮಾಡಿಕೊಂಡಿದೆ. ಟ್ರಾವಿಸ್ ಹೆಡ್ ಮತ್ತು ಸೀನ್ ಅಬಟ್ ಅವರನ್ನು ಟಿ-೨೦ ತಂಡದಿಂದ ಕೈಬಿಡಲಾಗಿದೆ.

*****END****